ಅಧ್ಯಕ್ಷರು ರವಿಯವರೆ, ನಿಮ್ಮ ಹತ್ತಿರ ಅನೇಕ ದಾಖಲಾತಿಗಳು ಇವೆ ವಿಷಯವನ್ನು ತಾವು ಸರ್ಕಾರದ ಗಮನಕ್ಕೆ ತಂದಿದ್ದೀರಿ ಅವುಗಳ ಬಗ್ಗೆ ಎಲ್ಲಾ ಮಾಹಿತಿಗಳನ್ನು ಸಂಬಂಧಪಟ್ಟಂತಹ ಸಚಿವರಿಗೆ ಕೊಡಿ ಅವರು ಉತ್ತರವನ್ನು ಕಳುಹಿಸುತ್ತಾರೆ ಈಗ ಸಚಿವರು ಮಾತನಾಡುತ್ತಾರೆ ಕುದುರೆಮುಖದಲ್ಲಿ ಗಣಿಗಾರಿಕೆ ನಡೆಯುತ್ತಿದೆ, ಅದರ ಬಗ್ಗೆ ಹೇಳಿ

ಶ್ರೀ ಸಿದ್ಧರಾಮಯ್ಯ (ಉಪಮುಖ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿ ಉತ್ತರವನ್ನು ಒದಗಿಸಿಕೊಡಲಾಗುವುದು ಅದರ ಬಗ್ಗೆ ಮಾನ್ಯ ರವಿಯವರು ತಮ್ಮ ಹತ್ತಿರ ಇರುವ ದಾಖಲಾತಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲಿ

ಶ್ರೀ ಬಿ ಎಸ್ ಯಡಿಯೂರಪ್ಪ ಅಧ್ಯಕ್ಷರು ಯಾರ ಹೆಸರನ್ನು ಕರೆಯುತ್ತಾರೋ ಅವರು ಮಾತನಾಡಿ

ಅಧ್ಯಕ್ಷರು ಈಗ ಮಾನ್ಯ ಅಲ್ಲೋಡು ಹನುಮಂತಪ್ಪನವರು ಮಾತನಾಡಿ

3 ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಎವಿಧ ಇಲಾಖೆಗಳಲ್ಲಿ ಸುಮಾರು 385 ಹುದ್ದೆಗಳು ಖಾಲಿ ಇರುವುದರ ಬಗ್ಗೆ

ಶ್ರೀ ಅಲ್ಲೋಡು ಹನುಮಂತಪ್ಪ(ದೇವದುರ್ಗ) ಮಾನ್ಯ ಅಧ್ಯಕ್ಷರೆ, ನನಗೆ ತಾವು ಶೂನ್ಯವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ತಮಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ರಾಯಚೂರು ಜಿಲ್ಲೆಯ ನನ್ನ ಮತಕ್ಷೇತ್ರವಾದ ದೇವದುರ್ಗ ತಾಲ್ಲೂಕು ಬಹಳ ದೊಡ್ಡ ಹೆಸರನ್ನು ಪಡೆದಿದೆ ಎಲ್ಲಾ ತಾಲ್ಲೂಕುಗಳು ಅಭಿವೃದ್ಧಿಯತ್ತ ತನ್ನ ಹೆಸರನ್ನು ಪಡೆದುಕೊಂಡಿದ್ದರೆ, ನನ್ನ ತಾಲ್ಲೂಕು ಇಡೀ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ ದೇಶದಲ್ಲಿ ಭಾರತ ಏಷ್ಯ ಖಂಡದಲ್ಲಿ ಬಹಳ ಹಿಂದುಳಿದಿರುವಂತಹ ತಾಲ್ಲೂಕು ಎಂದು ಸರ್ಕಾರದ ಎಲ್ಲಾ ಪುಸ್ತಕಗಳಲ್ಲಿ ಇದನ್ನು ಮುದ್ರಿಸಿದ್ದರು ನಮ್ಮ ಕ್ಷೇತ್ರದಲ್ಲಿ ಏನೆಂದರೆ, ಸುಮಾರು 385 ಹುದ್ದೆಗಳು ಖಾಲಿ ಇದೆ ಅಲ್ಲಿ ಉಳಿದವರು ಯಾರು ಎಂಬುದು ನಮಗೆ ಚಿಂತೆ ಆಗಿದೆ ಒಂದು ತಾಲ್ಲೂಕಿನಲ್ಲಿ 385 ಹುದ್ದೆಗಳು ಖಾಲಿ ಇವೆ ಎಂದರೆ ನಾವು ಆ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ಪ್ರಾಥಮಿಕ ಶಾಲಾ ಶಿಕ್ಷಕರ 75 ಹುದ್ದೆಗಳು ಖಾಲಿ ಇವೆ, ಸರ್ಕಾರಿ ಪ್ರೌಢಶಾಲೆಯಲ್ಲಿ 38 ಹುದ್ದೆಗಳು ಖಾಲಿ ಇವೆ, ಬಿಇಒ ಆಫೀಸ್‌ನಲ್ಲಿ 3 ಹುದ್ದೆಗಳು ಖಾಲಿ ಇವೆ, ಬಾಲಕ–ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ 9 ಹುದ್ದೆಗಳು ಖಾಲಿ ಇವೆ, ಪ್ರಥಮ ದರ್ಜೆ ಕಾಲೇಜಿನಲ್ಲಿ 9 ಹುದ್ದೆಗಳು ಖಾಲಿ ಇವೆ, ಕೃಷಿ ಇಲಾಖೆಯಲ್ಲಿ 28 ಹುದ್ದೆಗಳು, ಸಮಾಜ ಕಲ್ಯಾಣ ಇಲಾಖೆಯಲ್ಲಿ 48 ಹುದ್ದೆಗಳು, ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಒಂದು ಹುದ್ದೆ ಖಾಲಿ ಇದೆ ರೇಷ್ಮೆ ಇಲಾಖೆಯಲ್ಲಿ 4 ಹುದ್ದೆಗಳು ಖಾಲಿ ಇವೆ, ತೋಟಗಾರಿಕೆ ಇಲಾಖೆಯಲ್ಲಿ 3 ಹುದ್ದೆಗಳು ಖಾಲಿ ಇವೆ, ಶಿಶುಪಾಲನಾ ಅಭಿವೃದ್ಧಿ ಯೋಜನೆಯ ಇಲಾಖೆಯಲ್ಲಿ 4 ಹುದ್ದೆಗಳು, ಪಶುಸಂಗೋಪನಾ ಮತ್ತು ವೈದ್ಯಕೀಯ ಇಲಾಖೆಯಲ್ಲಿ 23 ಹುದ್ದೆಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 93 ಹುದ್ದೆಗಳು, ದೇವದುರ್ಗ ತಾಲ್ಲೂಕು ಪಂಚಾಯಿತಿ ಕಾರ್ಯಾಲಯದಲ್ಲಿ 10 ಹುದ್ದೆಗಳು ಖಾಲಿ ಇವೆ, ತಹಶೀಲ್ದಾರರ ಕಛೇರಿಯಲ್ಲಿ 13 ಹುದ್ದೆಗಳು ಖಾಲಿ ಇವೆ.

ಅಧ್ಯಕ್ಷರು ಮಾನ್ಯ ಹನುಮಂತಪ್ಪನವರೇ ಒಟ್ಟು ಎಷ್ಟು ಹುದ್ದೆಗಳು ಖಾಲಿ ಇವೆ ಅಷ್ಟರ ಬಗ್ಗೆ ಒಟ್ಟಿಗೆ ಒಂದೇ ಸಾರಿ ಹೇಳಿ.

ಶ್ರೀ ಅಲ್ಕೋಡು ಹನುಮಂತಪ್ಪ ಇಷ್ಟು ಹುದ್ದೆಗಳು ಖಾಲಿ ಇದ್ದ ಮೇಲೆ ನಾವು ಈ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಹೇಗೆ ಸಾಧ್ಯ ಎಂಬುದರ ಬಗ್ಗೆ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ನಾವು ಒಂದೊಂದು ಸಲ ಸಂಬಂಧಪಟ್ಟಂತಹ ಮಂತ್ರಿಗಳಿಗೆ ಈ ಹುದ್ದೆಗಳನ್ನು ತುಂಬಿರಿ ಎಂದು ಹೇಳಿ ಪತ್ರವನ್ನು ಕೊಟ್ಟರೆ ಅದರ ಮೇಲೆ ಪರಿಶೀಲಿಸುತ್ತೇನೆ, ಪರಿಶೀಲಿಸಿ, ಕಡತ ಮುಂಡಿಸಿ ಎಂದು ಬರೆಯುತ್ತಾರೆ ಇವರು ಪರಿಶೀಲಿಸಿ ಎಂದು ಹೇಳಿದರೆ ನಾವು ಪರಿಶೀಲಿಸಿ ಎಂದು ಬರೆದಿರುವಂತಹ ಪತ್ರವನ್ನು ತೆಗೆದುಕೊಂಡು ಇಲಾಖೆಗಳಿಗೆ ಹೋದರೆ ಇಲಾಖೆಯ ಮುಖ್ಯಸ್ಥರು, ಪ್ರಿನ್ಸಿಪಲ್ ಸೆಕ್ರೆಟರಿಯವರು, ಸ್ವಾಮಿ ಇದರಲ್ಲಿ ಪರಿಶೀಲಿಸಿ ಎಂದು ಬರೆದಿದ್ದಾರೆ, ಅದಕಾರಣ ವರ್ಗ ಮಾಡುವುದಕ್ಕೆ ಬರುವುದಿಲ್ಲ, ವರ್ಗ ಮಾಡಿ ಎಂದು ಆದೇಶ ಕೊಟ್ಟರೆ ಅನುಕೂಲವಾಗುತ್ತದೆ

ಅಧ್ಯಕ್ಷರು ನಿಮ್ಮ ಮನವಿಯನ್ನು ಸರ್ಕಾರಕ್ಕೆ ಹೇಳಿಬಿಡಿ ಅದರ ಬಗ್ಗೆ ಸರ್ಕಾರ ಉತ್ತರ ಕೊಡುತ್ತದೆ

ಶ್ರೀ ಅಲ್ಕೋಡು ಹನುಮಂತಪ್ಪ ನಾನು ಮನವಿಯನ್ನು ಹೇಳುತ್ತಿದ್ದೇನೆ, ನನಗೆ ಇರತಕ್ಕಂತಹ ತೊಂದರೆಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಏನಾಗಿದೆ ಮಾರ್ಗಾಯಿಸಿ ಎಂದು ಬರೆದರೆ ಮಾತ್ರ ವರ್ಗ ಮಾಡುತ್ತೇವೆ, ಪರಿಶೀಲಿಸಿ ಎಂದು ಬರೆದರೆ ಮಾಡುವುದಿಲ್ಲ ಎಂದು ಹೇಳತಕ್ಕಂತಹ ಮಾತನ್ನು ಹೇಳುವುದದಾದರೆ, ನಾನು ತಮ್ಮ ಗಮನಕ್ಕೆ ತರುತ್ತೇನೆ ಇಷ್ಟು ಹುದ್ದೆಗಳನ್ನು ಸರ್ಕಾರ ಯಾವಾಗ ತುಂಬುತ್ತದೆ ಎಂಬುದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಕೇಳಬಯಸುತ್ತೇನೆ ಇದನ್ನು ಯಾವಾಗ ತುಂಬುತ್ತಾರೆಂಬ ಬಗ್ಗೆ ಪುನಃ ಮಾತನಾಡುವ ಬಗ್ಗೆ ಅವಕಾಶವನ್ನು ಮಾಡಿಕಡಬೇಕು ಎಂದು ಮತ್ತೊಮ್ಮೆ ತಮ್ಮನ್ನು ಅರಿಕೆ ಮಾಡುತ್ತೇನೆ

ಅಧ್ಯಕ್ಷರು ಅವರ ಕ್ಷೇತ್ರದಲ್ಲಿ 348 ಹುದ್ದೆಗಳು ಖಾಲಿ ಇವೆ ಅದರ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ

ಶ್ರೀ ಸಿದ್ಧರಾಮಯ್ಯ (ಉಪಮುಖ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ದೇವದುರ್ಗ ತಾಲ್ಲೂಕಿನಲ್ಲಿ 300ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ ಎಂದು ಅವರು ಹೇಳಿದ್ದಾರೆ ಅಲ್ಲದೆ, ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆ ಎಂಬುದರ ಬಗ್ಗೆ ಕೂಡ ಹೇಳಿದ್ದಾರೆ ಎಷ್ಟು ಸ್ಯಾಕ್ಷನ್ಡ್ ಪೋಸ್ಟ್‌ಗಳು ಇವೆ, ಸ್ಯಾಂಕ್ಷನ್ ಆಗದೆ ಇರುವಂತಹ ಪೋಸ್ಟ್‌ಗಳು ಎಷ್ಟು ಇವೆ ಎಷ್ಟು ಹುದ್ದೆಗಳು ಯಾವ ಯಾವ ಇಲಾಖೆಯಲ್ಲಿ ರಿಫಾರ್ಮ್ಸ್ ಬಂದ ಮೇಲೆ ಕಟ್ ಆಗಿದೆ ಇವೆಲ್ಲವನ್ನೂ ನೋಡಿ ಉಳಿದಂತಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡತಕ್ಕಂತಹ ಕ್ರಮ ತೆಗೆದುಕೊಳ್ಳುತ್ತೇವೆ

ಅಧ್ಯಕ್ಷರು ಹನುಮಂತಪ್ಪನವರೆ, ಕೇಳಿ ಈಗ ಮತ್ತೆ ಮತ್ತೆ ಇದರ ಬಗ್ಗೆ ಶೂನ್ಯ ವೇಳೆಯಲ್ಲಿ ಕೇಳುವುದಕ್ಕೆ ಅವಕಾಶವಿಲ್ಲ ನೀವು ಏನು ಕೊಡಬೇಕು ಅದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು

ಇದ್ದಾರೆ, ಅವರ ಹತ್ತಿರ ದಾಖಲಾತಿಗಳನ್ನು ಕೊಟ್ಟುಬಿಡಿ, ಅವರು ಮಾಡಿಕೊಡುತ್ತಾರೆ ಈಗ ಶ್ರೀ ರಾಮರೆಡ್ಡಿಯವರು ಮಾತನಾಡಿ

4 ಶಿಡ್ಲಘಟ್ಟದಲ್ಲಿ ರೈತರಿಗೆ ಕಳಪೆ ರಸಗೊಬ್ಬರವನ್ನು ಸರಬರಾಜು ಮಾಡಿರುವ ಬಗ್ಗೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕೃಷಿ ಇಲಾಖೆಯ ಮಂತ್ರಿಗಳು ಇರಬೇಕಾಗಿತ್ತು, ಕಳಪೆ ರಸಗೊಬ್ಬರಗಳನ್ನು ವಿತರಣೆ ಮಾಡತಕ್ಕಂತಹ ಘಟನೆಗಳು ಇಡೀ ರಾಜ್ಯದಲ್ಲಿ ನಡೆಯುತ್ತಿದೆ ಅದರ ಭಾಗವಾಗಿ ನಿನ್ನೆ ಶಿಡ್ಲಘಟ್ಟದಲ್ಲಿ ರೈತರಿಗೆ ಕಳಪೆ ರಸಗೊಬ್ಬರವನ್ನು ಸರಬರಾಜು ಮಾಡಿ ಅದರಿಂದಾಗಿ ಸಂಪೂರ್ಣ ಹೊಲ ಮತ್ತು ಗದ್ದೆ ನಾಶವಾಗಿರುವುದರ ವಿರುದ್ಧ ಅದರ ಬಗ್ಗೆ ಕೇಳಲಿಕ್ಕೆ ಬಂದಂತಹ ಸಂದರ್ಭದಲ್ಲಿ ಆ ಮಾಲೀಕರ ಪರವಾಗಿ ಪೊಲೀಸ್‌ನವರು ನಿಂತುಕೊಂಡು ರೈತರ ಮೇಲೆ ಲಾರಿಚಾರ್ಜ್ ಮಾಡಿರುವಂತಹ ಘಟನೆಯೂ ಕೂಡ ನಡೆದಿರುತ್ತದೆ. ಇವತ್ತು ಬೆಂಗಳೂರು ಜಿಲ್ಲೆಯ ರೈತರುಗಳು ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ, ಏಕೆಂದರೆ, ಇಡೀ ರಾಜ್ಯದಲ್ಲಿ ಕಳಪೆ ರಸಗೊಬ್ಬರ ವಿತರಣೆ ಮಾಡುತ್ತಿರುವಂತಹ ಒಂದು ದೊಡ್ಡದಾದಂತಹ ಜಾಲ ಹುಟ್ಟಿ ಕೊಂಡಿದೆ ಅವರಿಗೆ ಎಲ್ಲಾ ರೀತಿಯಿಂದಲೂ ರಕ್ಷಣೆ ಸಿಗುತ್ತಿದೆ ಇದರ ಪರಿಣಾಮವಾಗಿ ರೈತರು ಇವತ್ತು ಸಂಪೂರ್ಣವಾಗಿ ನಾಶವಾಗುತ್ತಿದ್ದಾರೆ ಸಾಲ ಮತ್ತು ಸೋಲವನ್ನು ಮಾಡಿ ರಸಗೊಬ್ಬರಗಳನ್ನು ತೆಗೆದುಕೊಂಡು ಹೋಗಿ ಹಾಕಿದರೆ ಅವು ಯವುದಕ್ಕೂ ಇವತ್ತು ನಿಷ್ಪ್ರಯೋಜನವಾಗಿ ಗದ್ದೆಗಳು ನಾಶವಾಗಿ ಇವತ್ತಿನ ದಿವಸ ರೈತರು ಸಾಲಗಾರನಾಗಿ ಸಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ ಆದರೆ ಇವತ್ತು ನಿನ್ನೆ ಈ ಘಟನೆಯೂ ಪ್ರಾರಂಭವಾಗಿದೆ ಶಿಡ್ಲಘಟ್ಟದಲ್ಲಿ ಲಾರಿಚಾರ್ಜ್ ಆಗಿದೆ, ಹತ್ತಾರು ಜನ ರೈತರಿಗೆ ಹೊಡೆತವಾಗಿದೆ, ಇದು ಇಡೀ ರಾಜ್ಯದಲ್ಲಿ ಇವತ್ತು ಮರುಕಳುಹಿಸುವಂತಹ ಸಂದರ್ಭವಿದೆ ಆದ್ದರಿಂದ ನಾನು ಇದನ್ನು ಸರ್ಕಾರದ ಗಮನಕ್ಕೆ ತಂದು ತಕ್ಷಣ ಇಡೀ ರಾಜ್ಯದಲ್ಲಿ ಈ ಕಳಪೆ ರಸಗೊಬ್ಬರವನ್ನು ಸರಬರಾಜು ಮಾಡತಕ್ಕಂತಹ ಕಂಪನಿಗಳು ಯಾವುದು ಇವೆ ಅವುಗಳಿಗೆ ಪರವಾನಗಿ ಎಲ್ಲಿಂದ ಬಂತು? ಪರವಾನಗಿ ಇಲ್ಲದೆ ಇರುವಂತಹವರು ಇವತ್ತು ಬ್ಲಾಕ್‌ನಲ್ಲಿ ಗೊತ್ತಿಲ್ಲದಂತೆ ಅಂಗಡಿಗಳಲ್ಲಿ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಾರೆ, ಅವರಿಗೆ ಯಾವ ಡಿಪಾರ್ಟ್‌ಮೆಂಟ್‌ನವರು ಅನುಮತಿಯನ್ನು ಕೊಟ್ಟಿದ್ದಾರೆ? ಸರ್ಕಾರ ಬೇರೆ ಏನಾದರೂ ಅವರಿಗೆ ಲೈಸೆನ್ಸ್ ಕೊಡತಕ್ಕಂತಹ ವ್ಯವಸ್ಥೆ ಏನಾದರೂ ಮಾಡಿದೆಯೋ? ಯಾವ ಆಧಾರದ ಮೇಲೆ ಅವರು ಮಾರಾಟ ಮಾಡುತ್ತಿದ್ದಾರೆ? ಮಾರಾಟ ಮಾಡುವಂತಹವರ ಮೇಲೆ ಕಳಪೆ ರಸ ಗೊಬ್ಬರಗಳನ್ನು ಮಾರಿದರೆ ಅದನ್ನು ನಿಯಂತ್ರಣ ಮಾಡುವ ಬಗ್ಗೆ ಸರ್ಕಾರ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಂಡಿದೆ ಎಂಬುದರ ಬಗ್ಗೆ ಯೋಚನೆ ಮಾಡಿದೆ ಇದರ ಬಗ್ಗೆ ದಯವಿಟ್ಟು ಸರ್ಕಾರ ಹೇಳಬೇಕು, ಏಕೆಂದರೆ ಇದು ರೈತಸಮುದಾಯಕ್ಕೆ ಮತ್ತೊಂದು ಹೊಡೆತವಾಗಿದೆ, ಒಂದು ಕಡೆ ಬಿತ್ತನೆಯ ಸಂದರ್ಭದಲ್ಲಿ ಕಳಪೆ ಬೀಜಗಳು ಈಗ ರಸಗೊಬ್ಬರಗಳು ಕಳಪೆಯದಾಗಿದೆ ರಸಗೊಬ್ಬರಗಳು ಕಳಪೆ, ಬಿತ್ತನೆಯ ಬೀಜಗಳು ಸಹ ಕಳಪೆಯದಾಗಿದೆ, ಪೆಸ್ಟಿಸೈಡ್ಸ್ ಕಳಪೆಯದಾಗಿದೆ ಎಲ್ಲವೂ ಕಳಪೆಯಾಗಿ ಈಗಾಗಲೇ ಸಾಯಸುತ್ತಿರುವಂತಹ ರೈತರಿಗೆ ಇನ್ನೂ